# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಗುರುವಾರ ದಿನಾಂಕ ೧೫ನೇ ಆಗಸ್ಟ್ ೧೯೮೫ ಶ್ರಾವಣ ೧೦, ಶಕ ವರ್ಷ ೧೯೦೭

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

### ಕೊಳ್ಳೇಗಾಲದಲ್ಲಿ ಸರ್ಕಾರಿ ರೇಷ್ಮೆ ಬಿತ್ತನೆಯ ಕೋಠಿಯಲ್ಲಿ ರೇಷ್ಮೆ ಮೊಟ್ಟೆಯ ಮಾರಾಟದ ಲೆಕ್ಕದ ಬಗ್ಗೆ.

೧೯೨ ಶ್ರೀ ಜಿ. ರಾಜೂಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ೧೯೮೧-೮೨ ಮತ್ತು ೧೯೮೨-೮೩ನೇ ಸಾಲುಗಳಲ್ಲಿ ಕೊಳ್ಳೇಗಾಲದ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯಲ್ಲಿ ಮಾರಾಟವಾದ ರೇಷ್ಮೆ ಮೊಟ್ಟೆಯ ಲೆಕ್ಕದ ಬಗ್ಗೆ ಅಧಿಕೃತವಾಗಿ ತಪಾಸಣೆ ಆಗಿದೆಯೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಕಂಡು ಬಂದ ನ್ಯೂನತೆಗಳೇನು, ಹಾಗೂ ಇದರಲ್ಲಿ ಸರ್ಕಾರದ ಹಣ ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ಹೌದು.

ಆ) ದಿನಾಂಕ ೧-೪-೧೯೭೯ ರಿಂದ ೩೧-೩-೧೯೮೩ ರವರೆಗಿನ ಅವಧಿಯಲ್ಲಿ, ಕೊಳ್ಳೇಗಾಲದ ಕೇಂದ್ರೀಯ ಬಿತ್ತನೆ ಕೋಠಿಯ ಲೆಕ್ಕಪತ್ರಗಳ ತಪಾಸಣೆಯಲ್ಲಿ, ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿವೆ.

(೧) ೩,೩೬,೩೨೦ ಡಿ.ಎಫ್.ಎಲ್ಸ್. (ರೋಗರಹಿತ ಮೊಟ್ಟೆಗಳು) ಗಳು ಬೇಡಿಕೆ ಇಲ್ಲದೆ ಬಾಕಿಯಾಗಿರುವುದಾಗಿ ಪ್ರಮಾಣೀಕರಿಸಲ್ಪಟ್ಟಿಲ್ಲ. ಅವುಗಳ ಒಟ್ಟು ಮೌಲ್ಯ ರೂ. ೧,೨೫,೫೪೬-೦೦.

(೨) ವಿಲೇವಾರಿ (ಡಿಸ್‌ಪೋಸಲ್) ರಿಜಿಸ್ಟರುಗಳಲ್ಲಿ ೧,೫೦,೯೨೩ ಡಿ.ಎಫ್.ಎಲ್ಸ್.ಗಳ ವಿಲೇವಾರಿ ಬಗ್ಗೆ ಲೆಕ್ಕ ಬರೆದಿಲ್ಲ. ಇವುಗಳ ಒಟ್ಟು ಮೌಲ್ಯ ರೂ. ೫೦,೬೯೯-೦೦.

(೩) ಮೊಟ್ಟೆಗಳನ್ನು ಇಲಾಖೆಯ ಬೇರೆ ಬೇರೆ ಅಧಿಕಾರಿಗಳಿಗೆ ಸರಬರಾಜು ಮಾಡಿರುವುದಾಗಿ ರಸೀದಿಯನ್ನು (ಇನ್‌ವಾಯ್ಸ್) ತೋರಿಸಲಾಗಿದೆ. ಇವುಗಳ ಒಟ್ಟು ಮೌಲ್ಯ ರೂ. ೬೦,೩೩೩-೦೫. ಈ ರಸೀದಿಗಳಲ್ಲಿ ನಮೂದಿಸಿರುವ ಮೊಟ್ಟೆಗಳನ್ನು ಯಾವುದೇ ಇಲಾಖಾ ಅಧಿಕಾರಿಗಳಿಂದ ಸ್ವೀಕರಿಸಿದ ಬಗ್ಗೆ ದಾಖಲೆಗಳು ಇಲ್ಲ.

(ಳ) ಕೊಳ್ಳೇಗಾಲ ಕೇಂದ್ರ ರೇಷ್ಮೆ ಬಿತ್ತನೆ ಕೋಠಿಯಿಂದ, ಇಲಾಖೆಯ ಬೇರೆ ಬೇರೆ ರೇಷ್ಮೆ ಬಿತ್ತನೆ ಕೋಠಿಗಳಿಗೆ ರೇಷ್ಮೆ ವಿದೇಶಿ ತಳಿಯ ಬಿತ್ತನೆ ಗೂಡುಗಳನ್ನು ಸರಬರಾಜು ಮಾಡಿದ ಬಗ್ಗೆ ರಸೀದಿಗಳನ್ನು ತಯಾರು ಮಾಡಲಾಗಿದೆ. ಆದರೆ ಅವನ್ನು ಸಂಬಂಧಪಟ್ಟ ಬಿತ್ತನೆ ಕೋಠಿಯ ಅಧಿಕಾರಿಗಳು ಸ್ವೀಕರಿಸಿದ ಬಗ್ಗೆ ದಾಖಲೆಗಳು ಇರುವುದಿಲ್ಲ. ಈ ವಿದೇಶಿ ತಳಿಗಳ ಒಟ್ಟು ಮೌಲ್ಯ ರೂ. ೧೦,೦೪೮–೨೮.

(಴) ರೇಷ್ಮೆ ಬಿತ್ತನೆ ಕೋಠಿಯ, ರೇಷ್ಮೆ ಇನ್ಸ್‌ಪೆಕ್ಟರ್ ಶ್ರೀ ಹೆಚ್. ಎನ್. ಸಂಜುಂಡಯ್ಯ ಇವರ ಹೆಸರಿನಲ್ಲಿ ರೂ. ೧೫,೨೧೧–೩೦ ಪಿ.ಸಿ.ಬಿ. ಬಾಕಿ ತೋರಿಸಲಾಗಿದೆ.

ಆ) (೧) ಇದರಿಂದ ಸರ್ಕಾರಕ್ಕೆ ಉಂಟಾದ ಒಟ್ಟು ನಷ್ಟ ರೂ. ೨,೬೧,೭೪೭–೭೩ ಎಂದು ಅಂದಾಜು ಮಾಡಲಾಗಿದೆ.

(೨) ಇನ್ನೂ ತನಕ ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ರೇಷ್ಮೆ ಇಲಾಖೆಯ ನಿರ್ದೇಶಕರಿಗೆ ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ ನಡೆಸುವಂತೆ ಆದೇಶ ನೀಡಲಾಗಿದೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೆ, ೧೯೮೧ರಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಲೆಕ್ಕ ತಪಾಸಣೆ ಮಾಡುತ್ತಿದ್ದೇವೆಂದು ಹೇಳಿದ್ದರು. ೧೯೮೫ರಲ್ಲಿ ಪುನಃ ಅದೇ ಪ್ರಶ್ನೆಯನ್ನು ಹಾಕಿದಾಗ ಲೆಕ್ಕ ತಪಾಸಣೆಗೆ ಆದೇಶವನ್ನು ಕೊಡಲಾಗಿದೆ ಅಂದರೆ ಇದೇನು ಧರ್ಮ ಸ್ವಾಮಿ ಕಾರ್ಯತಃ ಏನೇನು ನಡೆದಿದೆ? ಯಾವ್ಯಾವ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಿ? ಏತಕ್ಕೋಸ್ಕರ ಇದುವರೆಗೆ ಲೆಕ್ಕ ತಪಾಸಣೆಯನ್ನು ತಡೆ ಹಿಡಿದಿದ್ದೀರಿ? ಎಷ್ಟು ಸನ ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಡಲಾಗಿದೆ? ಒಂದೇ ಸಮನೆ ಚಾಕಿ ಹಾಕಲಿಕ್ಕೆ ಯಾರಿಗೆ ಅಧಿಕಾರ ಕೊಟ್ಟಿದ್ದೀರಿ? ಸಿಕ್ಕಾಬಟ್ಟೆ ಮೊಟ್ಟೆ ತಯಾರು ಮಾಡಲಿಕ್ಕೆ ಏತಕ್ಕೆ ಅವಕಾಶ ಕೊಟ್ಟಿದ್ದೀರಿ? ಅದಕ್ಷತೆ, ಅಪ್ರಮಾಣಿಕ ಭ್ರಷ್ಟಾಚಾರಿ ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸುಪ್ರೀಂ ಕೋರ್ಟ್ ತೀರ್ಮಾನದಂತೆ ಅವರನ್ನು ಏತಕ್ಕೆ ನೇರವಾಗಿ ವಜಾಮಾಡಬಾರದು?

ಶ್ರೀ ವೈ. ಕೆ. ರಾಮಯ್ಯ (ಮಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ರೇಷ್ಮೆ ಬಿತ್ತನೆ ಕೋಠಿಯಿಂದ ೨೮ಲಕ್ಷದ ೬೧ಸಾವಿರದ ೭೪೭ ರೂಪಾಯಿ ೭೩ಪೈಸೆ ನಷ್ಟವಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ನಷ್ಟಕ್ಕೂ ದುರುಪಯೋಗಕ್ಕೂ ವ್ಯತ್ಯಾಸವಿದೆ. ನಷ್ಟವಾಗಿರುವುದನ್ನು ಈಗ ಹೇಳಿದ್ದೇನೆ, ದುರುಪಯೋಗವಾಗಿರುವುದನ್ನು ನಾವು ಕಂಡುಹಿಡಿಯಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ೧೯೮೧ನೇ ಇಸವಿಯಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾರೆ ನಿಜ. ಅದೇ ವಿಷಯದಲ್ಲಿ ಇವತ್ತು ಪ್ರಶ್ನೆ ಮಾಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಆರ್ಡರ್ ಮಾಡಲಾಗಿದೆ.

"The Director of Sericulture has taken action to suspend Sri Shivarudraiah and Sri H.N. Nanjaiah".

ಅಮಾನತ್ತಿನಲ್ಲಿಟ್ಟು ಎನ್‌ಕ್ವಾಯರಿ ಮಾಡಲಿಕ್ಕೆ ಆರ್ಡರ್ ಕಳುಹಿಸಲಾಗಿದೆ. ಮಾನ್ಯ ಸದಸ್ಯರು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಏತಕ್ಕೆ ಡಿಸ್‌ಮಿಸ್ ಮಾಡಬಾರದು ಎಂದು ಹೇಳಿದರು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟನ್ನು ನಾನು ಓದಿದ್ದೇನೆ ಅದನ್ನು ಅನುಸರಿಸಿ ನಮ್ಮ ರಾಜ್ಯದಲ್ಲೂ ಸಹ ಕಾನೂನು ಕಟ್ಟಳೆಗಳನ್ನು ಬದಲಾವಣೆ ಮಾಡಬೇಕು. ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನ ಆಧಾರದ ಮೇಲೆ ಅಧಿಕಾರವನ್ನು ಚಲಾಯಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ವಜಾ ಮಾಡುವ ಬಗ್ಗೆ ಸಂದರ್ಭ ಬಂದರೆ ಅದನ್ನು ಅದನ್ನು ಪರಿಶೀಲನೆಮಾಡಿ ಕಾನೂನಿನ ಚೌಕಟ್ಟಿನಲ್ಲಿ ಕ್ರಮತೆಗೆದು ಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ.—ಲೆಕ್ಕದಲ್ಲಿ ವ್ಯತ್ಯಾಸ ಮಾಡಿದ್ದಾರೆ. ಬಹಳ ಮಹತ್ವವಾದ ವಿಷಯ ಇದು. ಎರಡು ನಿಮಿಷ ಅವಕಾಶ ಕೊಡಿ. ೧,೩೦,೯೨೨ ಮೊಟ್ಟೆಗಳ ಚಾಕಿಯನ್ನು ಯಾವ ರೀತಿ

ಮಾಡಿದ್ದಾರೆಂಬುದನ್ನು ನೋಡಿದ್ದೀರಾ? ಆ ಪೊಟ್ಟಣಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಬೇಕೆಂದು ಇಲಾಖೆಯ ಉಪ ವಿಭಾಗದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಸಿರಿಕಲ್ಚರ್‌ರವರು ಆದೇಶವನ್ನು ಕೊಟ್ಟಿದ್ದರೂ ಕೂಡ ಆ ರೀತಿ ಆ ಪೊಟ್ಟಣಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡದೆ ಪೊಟ್ಟಣಗಳು ಚಾಕಿಯಾಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ ೭೨,೪೯೮ ರೂ.ಗಳ ಮೊಟ್ಟೆಯನ್ನು ಬಿಟ್ಟಿದ್ದಾರೆ. ಅದರ ಬಗ್ಗೆ ಗಮನಿಸಬೇಕು. ಅವರ ಮೇಲಾಧಿಕಾರಿಗಳು ಕೊಟ್ಟಂತಹ ಆದೇಶವನ್ನೂ ಉಲ್ಲಂಘಿಸಿದ್ದಾರೆ. ಸುಮ್ಮನೆ ಇದನ್ನು ಹೇಳುತ್ತಾರೆ. ಇದರಲ್ಲಿ ಅವರು ದುರುಪಯೋಗ ಮಾಡಿದ್ದಾರೆ. ಸುಳ್ಳು ರಸೀದಿಯನ್ನು ಸೃಷ್ಟಿಮಾಡಿದ್ದಾರೆ. ಆ ವಿಚಾರ ಮಂತ್ರಿಗಳಿಗೂ ಗೊತ್ತಿದ್ದರೂ ಮುಚ್ಚುತ್ತಿದ್ದಾರೆ. ಆವನನ್ನು ಜಪಾನಿಗೆ ಕಳಿಸಬೇಕೆಂಬ ಉದ್ದೇಶದಿಂದ ಲೆಕ್ಕ ತಪಾಸಣೆಯನ್ನು ೫ ವರ್ಷಗಳಿಂದಲೂ ಮುಂದೂಡಿಸಿದ್ದಾರೆ. ಇದು ಎಂತಹ ಅನ್ಯಾಯ ?

ಶ್ರೀ ವೈ. ಕೆ. ರಾಮಯ್ಯ.—ಇಲ್ಲಿ ಯಾವುದೇ ವಿಚಾರವನ್ನು ಮುಚ್ಚಿಕೊಳ್ಳತಕ್ಕಂತಹದ್ದಕ್ಕೆ ಅವಕಾಶವೇ ಇಲ್ಲ. ಮಾನ್ಯ ಸದಸ್ಯರು ಕೇಳಿರತಕ್ಕಂತಹದ್ದಕ್ಕಿಂತ ಹೆಚ್ಚಿಗೆ ಏವರಗಳನ್ನು ಕೊಟ್ಟಿದ್ದೇನೆ. ಇದಕ್ಕೆ ಕಾರಣವೇನೆಂದರೆ, ಆಡಳಿತದ ವ್ಯವಸ್ಥೆಯಲ್ಲಿ ಏನಾದರು ಕೆಟ್ಟಿದ್ದು ಇದ್ದರೆ, ಅದನ್ನು ಹೊರಗೆ ಹಾಕಿ ಅದನ್ನು ಸಾರ್ವಜನಿಕರ ಗಮನಕ್ಕೆ ತಂದು ಕೆಟ್ಟದ್ದು ಮಾಡಿರುವವರಿಗೆ ಏನಾದರೂ ಬುದ್ಧಿ ಕಲಿಸಬೇಕೆಂಬುದರಲ್ಲಿ ನಾನು ಮೊದಲಿಗ. ಮುಚ್ಚಿಡತಕ್ಕಂತಹದ್ದು ಏನೂ ಇಲ್ಲ. ನಾನು ಕೂಡ ಅದಕ್ಕೆ ತಯಾರಿಲ್ಲ ತಯಾರು ಮಾಡಿದ ಚಾಕಿಯನ್ನು ಮಾರುವುದಕ್ಕಾಗಲಿಲ್ಲ ಅಂತ ಹೇಳಿದ್ದಾರೆ. ಆದರಲ್ಲಿ ಆದಂತಹ ನಷ್ಟಕ್ಕೆ ಇಲಾಖೆಯ ಮೇಲಾಧಿಕಾರಿಗಳು ಸರ್ಟಿಫಿಕೇಟನ್ನು ಕೊಡಬೇಕು. ಆದರೆ ಇದರಲ್ಲಿ ಆ ರೀತಿ ಸರ್ಟಿಫಿಕೇಟ್ ಮಾಡಿಲ್ಲ. ಸರ್ಕಾರಕ್ಕೆ ನಷ್ಟವಾಗಿದೆ. ಆದರ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ಆದರೆ ಆ ಅಧಿಕಾರಿಯನ್ನು ಜಪಾನಿಗೆ ಕಳಿಸುತ್ತಾರೋ ಇಂಗ್ಲೆಂಡಿಗೆ ಕಳಿಸಿಕೊಡುತ್ತಾರೋ ಆ ಪ್ರಶ್ನೆಯೆ ನನ್ನ ಮುಂದೆ ಇಲ್ಲ. ಹಿಂದೆ ಏನಾಯಿತು ಅದು ನನಗೆ ಗೊತ್ತಿಲ್ಲ ಆದರೆ ನಾನು ಇಷ್ಟನ್ನು ಮಾತ್ರ ಭರವಸೆ ಕೊಡುತ್ತೇನೆ. ಯಾವುದೇ ವಿಷಯದಲ್ಲಿ ಮುಚ್ಚಿಡ್ಜ ಮರೆ ಮಾಡುವ ಅವಶ್ಯಕತೆ ಇಲ್ಲ. ಯಾರನ್ನೂ ರಕ್ಷಣೆ ಮಾಡತಕ್ಕಂತಹ ಅವಶ್ಯಕತೆಯೂ ನನಗೆ ಇಲ್ಲ.

ಶ್ರೀ ಜಿ. ರಾಜು ಗೌಡ.—ಪ್ರಶ್ನೆಯ ಮೂಲ ಉದ್ದೇಶವನ್ನು ಹೇಳದೆ ಏನೇನೂ ಮಾತನಾಡುತ್ತಾರೆ. ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಚಾರಣೆಯನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ? ತಪ್ಪಿಸ್ಥರಿಂದ ಎಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೋ ಆ ಹಣವನ್ನು ೧೮ ಪರ್ಸೆಂಟ್ ಬಡ್ಡಿ ಸಮೇತ ವಸೂಲು ಮಾಡುತ್ತೀರೋ? ಅವರ ಚಿರಾಸ್ತಿಯನ್ನು ಅಟಾಚ್ ಮಾಡುತ್ತೀರೋ ಕೋರ್ಟಿನಲ್ಲಿ ಮಾಡುವ ಹಾಗೆ.

ಶ್ರೀ ವೈ. ಕೆ. ರಾಮಯ್ಯ.—ನಾನು ಈಗಾಗಲೇ ಇದರ ಬಗ್ಗೆ ಉತ್ತರ ಹೇಳಿದ್ದೇನೆ. ಇಬ್ಬರು ಅಧಿಕಾರಿಗಳನ್ನು ಈಗಾಗಲೇ ಅಮಾನತ್ತಿನಲ್ಲಿಡಲಾಗಿದೆ ತಪ್ಪು ಮಾಡಿದಂತಹ ಸರ್ಕಾರಿ ಅಧಿಕಾರಿಗಳಿಗೆ ಏನೇನು ಶಿಕ್ಷೆ ಕೊಡಬೇಕು ? ಏನೇನು ಕ್ರಮ ತೆಗೆದುಕೊಳ್ಳಬೇಕೆಂಬುದರಲ್ಲಿ ನಿಯಮಾವಳಿಗಳು ಇವೆ. ಹಣವನ್ನು ವಸೂಲಿ ಮಾಡುವುದಕ್ಕೂ ಕೂಡ ನಿಯಮಾವಳಿಗಳೂ ಇವೆ. ಬಡ್ಡಿಯನ್ನು ವಸೂಲಿ ಮಾಡಬೇಕೋ, ಚಕ್ರ ಬಡ್ಡಿಯನ್ನು ಸೇರಿಸಿ ವಸೂಲಿ ಮಾಡಬೇಕೋ ಎಂಬುದರ ಬಗ್ಗೆಯೂ ನಿಯಮಾವಳಿಗಳು ಇವೆ. ರಿವರ್ಟ್ ಮಾಡುವುದಕ್ಕೆ ಮತ್ತೆ ಅವರನ್ನು ಡಿಸ್‌ಮಿಸ್ ಮಾಡುವುದಕ್ಕೆ ಕಾನೂನು ಇದೆ. ಮಾಡಿರುವ ಅಪರಾಧ ಅವರು ನಡೆದುಕೊಂಡಿರುವ ನಡವಳಿಕೆಗಳ ಆಧಾರದ ಮೇಲೆ ಅದನ್ನು ಗಮನದಲ್ಲಿಟ್ಟುಕೊಂಡು ಕಾನೂನಿನ ಚೌಕಟ್ಟಿನಲ್ಲಿ ಯಾವ ಕ್ರಮವನ್ನು ಆ ಅಧಿಕಾರಿಯ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ನೋಡುತ್ತೇನೆ. ಇದರಿಂದ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತಿದ್ದೇನೆ.

## ಸಿಂಧನೂರು ಪಟ್ಟಣದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.

೪೩೦. ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?